

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ

# ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ಮತ್ತು

# ಪ್ರಶ್ನೆ ಪತ್ರಿಕೆ


–:ರಚನೆ :–

**ರವೀಶ್ ಕುಮಾರ್ ಬಿ.**

ನಿವೃತ್ತ ಕನ್ನಡ ಭಾಷಾ ಶಿಕ್ಷಕರು
ರಾಜ್ಯ ಸಂಪನ್ಮೂಲ ವ್ಯಕ್ತಿ (ಕನ್ನಡ)
ಮೈಸೂರು – 570033
ಸಂಚಾರಿ ವಾಣಿ ಸಂಖ್ಯೆ : 9448958498

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ಪರಿವಿಡಿ


| ಹಂತದ ಸಂಖ್ಯೆ | ಹಂತದ ಹೆಸರು | ಪುಟ ಸಂಖ್ಯೆ ಇಂದ | ಪುಟ ಸಂಖ್ಯೆ ವರೆಗೆ |
|---|---|---|---|
| 1 | ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 3 | 3 |
| 2 | ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 3 | ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ | 3 | 3 |
| 4 | ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ. | 4 | 4 |
| 5 | ನೀಲ ನಕಾಶೆ | 5 | 5 |
| 6 | ಪ್ರಶ್ನೆ ಪತ್ರಿಕೆ | 6 | 9 |
| 7 | ಮೌಲ್ಯಾಂಶ / ಉತ್ತರ ಸೂಚಿ ಮತ್ತು ಅಂಕ ವಿತರಣೆ | 10 | 18 |
| 8 | ಪ್ರಶ್ನಾನುಸಾರ ವಿಶ್ಲೇಷಣೆ | 19 | 20 |

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

# 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 21 | 21 | 14 |
| 2 | ಗ್ರಹಿಕೆ | 36 | 36 | 19 |
| 3 | ಅಭಿವ್ಯಕ್ತಿ | 39 | 39 | 11 |
| 4 | ಪ್ರಶಂಸೆ | 04 | 04 | 01 |
| | **ಒಟ್ಟು** | **100** | **100** | **45** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 10 | 10 | 10 |
| 2 | ಕಿರು ಉತ್ತರ – 1 | 07 | 07 | 07 |
| 3 | ಕಿರು ಉತ್ತರ – 2 | 20 | 20 | 10 |
| 4 | ದೀರ್ಘ ಉತ್ತರ – 1 | 33 | 33 | 11 |
| 5 | ದೀರ್ಘ ಉತ್ತರ – 2 | 20 | 20 | 05 |
| 6 | ದೀರ್ಘ ಉತ್ತರ – 3 | 10 | 10 | 02 |
| | **ಒಟ್ಟು** | **100** | **100** | **45** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 30 | |
| 2 | ಸಾಧಾರಣ | 50 | 50 | |
| 3 | ಕಠಿಣ | 20 | 20 | |
| | **ಒಟ್ಟು** | **100** | **100** | **45** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | 28 | 28 | 13 |
| 2 | **ಪದ್ಯ ಒಟ್ಟು** | 30 | 30 | 11 |
| 3 | **ಪಠ್ಯಪೋಷಕ ಅಧ್ಯಯನ** | 09 | 09 | 05 |
| 4 | **ಅಪಠಿತ ಗದ್ಯ** | 04 | 04 | 01 |
| 5 | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 29 | 29 | 15 |
| | **ಸಮಗ್ರ ಒಟ್ಟು** | **100** | **100** | **45** |

ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಶಬರಿ | 08 |
| 2 | ಲಂಡನ್ ನಗರ | 08 |
| 3 | ಶುಕನಾಸನ ಉಪದೇಶ | 06 |
| 4 | ಭಾಗ್ಯಶಿಲ್ಪಿಗಳು | 06 |
| | ಗದ್ಯ ಒಟ್ಟು | 28 |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಅಂಕಗಳು |
|---|---|---|
| 1 | ಸಂಕಲ್ಪಗೀತೆ | 08 |
| 2 | ಹಕ್ಕಿ ಹಾರುತಿದೆ ನೋಡಿದಿರಾ? | 07 |
| 3 | ಹಲಗಲಿಯ ಬೇಡರು | 08 |
| 4 | ಕೌರವೇಂದ್ರನ ಕೊಂದೆ ನೀನು | 07 |
| | ಪದ್ಯ ಒಟ್ಟು | 30 |

## 3. ಪಠ್ಯ ಪೋಷಕ ಅಧ್ಯಯನ

| ಕ್ರ.ಸಂ | ಪಠ್ಯಪೋಷಕ ಅಧ್ಯಯನ ಪಾಠದ ಹೆಸರು | ಅಂಕಗಳು |
|---|---|---|
| 1 | ಉದಾತ್ತ ಚಿಂತನೆಗಳು | 04 |
| 2 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು | 03 |
| 2 | ಭಗತ್‌ಸಿಂಗ್ | 02 |
| | ಪದ್ಯ ಒಟ್ಟು | 09 |

## 4. ಅಪಠಿತ ಗದ್ಯ

| ಕ್ರ.ಸಂ | ಅಪಠಿತ ಗದ್ಯ | ಅಂಕಗಳು |
|---|---|---|
| 1 | ಅಪಠಿತ ಗದ್ಯ | 04 |

## 5. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ವಿಷಯ | ಅಂಕಗಳು |
|---|---|---|
| 1 | ವ್ಯಾಕರಣಾಂಶಗಳು | 10 |
| 2 | ಅಲಂಕಾರ | 03 |
| 3 | ಛಂದಸ್ಸು | 03 |
| 4 | ಗಾದೆ ವಿಸ್ತರಣೆ | 03 |
| 5 | ಪತ್ರಲೇಖನ | 05 |
| 6 | ಪ್ರಬಂಧ ಲೇಖನ | 05 |
| | ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು | 29 |

## ಹಂತ : 5(ಎ). ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ದೀ ಉ.1 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ದೀ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಶಬರಿ | ** | 1(1) | 1(3) | ** | ** | ** | 2(2) | ** | ** | ** | ** | ** | ** | ** | ** | 1(1) | 2(2) | 1(3) | ** | ** | 08 | 04 |
| 2 | ಲಂಡನ್ ನಗರ | ** | 1(1) | ** | ** | ** | ** | ** | ** | ** | ** | 1(3) | 1(4) | ** | ** | ** | 1(1) | ** | 1(3) | 1(4) | ** | 08 | 03 |
| 3 | ಶುಕನಾಸನ ಉಪದೇಶ | ** | 1(1) | ** | ** | ** | ** | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| 4 | ಭಾಗ್ಯಶಿಲ್ಪಿಗಳು | ** | ** | ** | ** | ** | 1(1) | 1(2) | ** | ** | ** | 1(3) | ** | ** | ** | ** | 1(1) | 1(2) | 1(3) | ** | ** | 06 | 03 |
| | **ಗದ್ಯ ಒಟ್ಟು** | ** | **3(1)** | **1(3)** | ** | ** | **1(1)** | **4(2)** | ** | ** | ** | **3(3)** | **1(4)** | ** | ** | ** | **4(1)** | **4(2)** | **4(3)** | **1(4)** | ** | **28** | **13** |
| 1 | ಸಂಕಲ್ಪಗೀತೆ | ** | 1(1) | ** | 1(4) | ** | ** | ** | ** | ** | ** | 1(3) | ** | ** | ** | ** | 1(1) | ** | 1(3) | 1(4) | ** | 08 | 03 |
| 2 | ಹಕ್ಕಿ ಹಾರುತಿದೆ ನೋಡಿದಿರಾ | ** | ** | 1(3) | ** | ** | ** | ** | ** | ** | ** | ** | ** | ** | 1(4) | ** | ** | ** | 1(3) | 1(4) | ** | 07 | 02 |
| 3 | ಹಲಗಲಿಯ ಬೇಡರು | ** | ** | ** | ** | ** | 1(1) | 2(2) | ** | ** | ** | 1(3) | ** | ** | ** | ** | 1(1) | 2(2) | 1(3) | ** | ** | 08 | 04 |
| 4 | ಕೌರವೇಂದ್ರನ ಕೊಂದೆ ನೀನು | ** | ** | ** | ** | ** | ** | ** | ** | ** | ** | 1(3) | 1(4) | ** | ** | ** | ** | ** | 1(3) | 1(4) | ** | 07 | 02 |
| | **ಪದ್ಯ ಒಟ್ಟು** | ** | **1(1)** | **1(3)** | **1(4)** | ** | 1(1) | **2(2)** | ** | ** | ** | **3(3)** | **1(4)** | ** | **1(4)** | ** | **2(1)** | **2(2)** | **4(3)** | **3(4)** | ** | **30** | **11** |
| 1 | ಉದಾತ್ತ ಚಿಂತನೆಗಳು | ** | ** | ** | ** | ** | ** | 2(2) | ** | ** | ** | ** | ** | ** | ** | ** | ** | 2(2) | ** | ** | ** | 04 | 02 |
| 2 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು | ** | 1(1) | ** | ** | ** | ** | 1(2) | ** | ** | ** | ** | ** | ** | ** | ** | 1(1) | 1(2) | ** | ** | ** | 03 | 02 |
| 3 | ಭಗತ್ ಸಿಂಗ್ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | ** | **1(1)** | ** | ** | ** | ** | **4(2)** | ** | ** | ** | ** | ** | ** | ** | ** | **1(1)** | **4(2)** | ** | ** | ** | **09** | **05** |
| 1 | **ಅಪಠಿತ ಗದ್ಯ** | ** | ** | ** | ** | ** | ** | ** | ** | 1(4) | ** | ** | ** | ** | ** | ** | ** | ** | ** | **1(4)** | ** | **04** | **01** |
| 1 | ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಛಂದಸ್ಸು | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 3 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | | ** | ** | ** | ** | 1(3) | ** | ** | 03 | 01 |
| 4 | ಪತ್ರಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 5 | ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | ** | 1(5) | ** | ** | ** | ** | ** | ** | 1(5) | 05 | 01 |
| 6 | ವ್ಯಾಕರಣಾಂಶಗಳು | **06(1))** | ** | ** | ** | **4(1)** | ** | ** | ** | ** | ** | ** | ** | ** | ** | **10(1)** | ** | ** | ** | ** | ** | 10 | 10 |
| | **ಒಟ್ಟು** | **06(1)** | ** | ** | ** | **4(1)** | ** | ** | **3(3)** | ** | ** | 1(3) | ** | **2(5)** | ** | **10(1)** | ** | ** | **3(3)** | ** | **2(5)** | **29** | **15** |
| | **ಸಮಗ್ರ ಒಟ್ಟು** | **06(1)** | **5(1)** | **2(3)** | **1(4)** | **4(1)** | **2(1)** | **10(2)** | **2(3)** | **1(4)** | ** | **7(3)** | **2(4)** | **2(5)** | **1(4)** | **10(1)** | **7(1)** | **10(2)** | **11(3)** | **5(4)** | **2(5)** | **100** | **45** |
| | | **21 – 14** | | | | **36 – 19** | | | | | **39 – 11** | | | | **4 – 1** | **100 – 45** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

**ಸಮಯ : 03–00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳು ಸಂಖ್ಯೆ;
   (ಎ) 25 (ಬಿ) 09 (ಸಿ) 13 (ಡಿ) 34
2. 'ಗುರೂಪದೇಶ' ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ವೃದ್ಧಿ (ಸಿ) ಜಶ್ತ್ವ (ಡಿ) ಯಣ್
3. ಇವುಗಳಲ್ಲಿ ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಹಾಲುಗಡಲು (ಬಿ) ಬೆಳ್ಗೊಡೆ (ಸಿ) ತಲೆಗಡರಿ (ಡಿ) ಸುಕ್ಕುಗಟ್ಟದೆ
4. 'ಪ್ರೀತಿಯ ಹಣತೆಯ ಹಚ್ಚೋಣ' ವಾಕ್ಯವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಭಾವನಾರ್ಥಕ
5. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆಯಿದು;
   (ಎ) ವಾಕ್ಯವೇಷ್ಟನ (ಬಿ) ಆವರಣ (ಸಿ) ವಿವರಣಾತ್ಮಕ (ಡಿ) ಉದ್ಧರಣ
6. ವಿಶ್ವೇಶ್ವರಯ್ಯ ಅವರಿಗೆ ಭಾರತ ಸರ್ಕಾರ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿತು. – ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 * 1 = 4**

7. ವರ್ಣ : ಬಣ್ಣ : : ಪ್ರಸಾದ : ______________________
8. ಕೃಷ್ಣರಾಜ ಒಡೆಯರ್ : ಅಂಕಿತನಾಮ : : ವಿದ್ವಾಂಸ : ______________________
9. ಸೊಗಸಾಗಿ : ಸಾಮಾನ್ಯಾರ್ಥಕಾವ್ಯಯ : : ಹೌದು : ________________
10. ಬೀದಿಬೀದಿ : ದ್ವಿರುಕ್ತಿ : : ದಯೆದಾಕ್ಷಿಣ್ಯ : __________________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
12. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
13. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?
14. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಯಾವ ಪದವಿಯನ್ನು ನೀಡಿ ಗೌರವಿಸಿತು?
15. ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?
16. ಯಾವ ಘಟನೆ ಹಲಗಲಿ ಬೇಡರು ಲಾವಣಿಗೆ ಕಾರಣವಾಗಿದೆ?
17. ಪೆರಿಯಾರ್ ಅವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

18. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
19. ಶಬರಿಯು ರಾಮಲಕ್ಷ್ಮಣರನ್ನು ಹೇಗೆ ಉಪಚರಿಸಿದಳು?
20. ರಾಜರ ಪ್ರಕೃತಿ ಹೇಗಿರುತ್ತದೆ?
21. ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಹೇಗೆ ಭದ್ರ ಬುನಾದಿಯನ್ನು ಹಾಕಿದರು?
22. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ಮಾಡಿತು?
23. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?
24. ಡಾ. ಅಂಬೇಡ್ಕರ್ ಅವರ ಪ್ರಕಾರ ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?
25. 'ಅನ್‌ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿ ಅವರ ಮೇಲೆ ಹೇಗೆ ಪರಿಣಾಮ ಬೀರಿತು?
26. ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?
27. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **2 * 3 = 6**

28. ಪು. ತಿ. ನರಸಿಂಹಾಚಾರ್
29. ದ. ರಾ. ಬೇಂದ್ರೆ

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

30. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

31. ಮಾರಿಗೌತಣವಾಯ್ತು ನಾಳಿನ ಭಾರತವು

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 * 3 = 3**

32. ತಾಳಿದವನು ಬಾಳಿಯಾನು
ಅಥವಾ
ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

33. “ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ”
34. “ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ”
35. “ದುಡ್ಡು ದುರಭಿಮಾನದ ತವರು”
36. “ಜೀವ ಸತ್ತು ಹೋಗುವುದು ಗೊತ್ತ”
37. “ನಿನ್ನಪದೆಸೆಯ ಬಯಸುವನಲ್ಲ”
38. “ಪ್ರೀತಿಯ ಹಣತೆ ಹಚ್ಚೋಣ”

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 * 4 = 4**

39. ಕಲುಷಿತವಾದೀ ________________
____________________________
____________________________
___________________ ಮುಟ್ಟೋಣ
ಅಥವಾ
ಮತಗಳೆಲ್ಲವೂ ________________
____________________________
____________________________
___________________ ಬಿತ್ತೋಣ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 * 4 = 4**

40. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?
ಅಥವಾ
‘ವೆಸ್ಟ್‌ಮಿನಿಸ್ಟರ್ ಅಬೆ’ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ವಿವರಿಸಿ.

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? ವಿವರಿಸಿ
ಅಥವಾ
ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

43. **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*04 =04 (2+2)**

ಭಾರತೀಯ ಕ್ರಿಕೆಟಿನ ಯಶಸ್ಸಿನ ಹಿಂದೆ ನೂರಾರು ಖ್ಯಾತನಾಮರಿದ್ದಾರೆ. ಅವರಲ್ಲಿ ಕರ್ನಾಟಕದ ರಾಹುಲ್ ದ್ರಾವಿಡ್ ಸಹ ಒಬ್ಬರು. 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬ ಮಾತು ರಾಹುಲ್ ದ್ರಾವಿಡ್ ಅವರಿಗೆ ಸೊಗಸಾಗಿ ಅನ್ವಯವಾಗುತ್ತದೆ. ಅವರು ಬಾಲ್ಯದಲ್ಲಿಯೇ ಕ್ರಿಕೆಟ್ ಆಟದಲ್ಲಿ ಆಸಕ್ತಿಹೊಂದಿ ಸತತ ಅಭ್ಯಾಸ ಮಾಡುತ್ತಿದ್ದರು. ಅದರ ಫಲವಾಗಿ ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿಯೇ ಶಾಲಾತಂಡವನ್ನು ಪ್ರತಿನಿಧಿಸುವಂತಾಯಿತು. ಆಡಿದ ಮೊದಲ ಪಂದ್ಯದಲ್ಲಿಯೇ ಶತಕವನ್ನು ಬಾರಿಸಿದರು. ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು. ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು. ರಾಹುಲ್ ದ್ರಾವಿಡ್ ಅವರು ಎಂದೂ ಸ್ವಂತ ದಾಖಲೆಗಾಗಿ ಆಡಿದವರಲ್ಲ; ತಂಡದ ಗೆಲುವಿಗಾಗಿ; ದೇಶದ ಗೌರವಕ್ಕಾಗಿ ಆಡಿದವರು.

**ಪ್ರಶ್ನೆಗಳು :**

1. ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?
2. ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?

44. ನಿಮ್ಮನ್ನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಜಯಂತ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಭಾಷಾ ಪ್ರಯೋಗಾಲಯ ಪ್ರಾರಂಭಿಸಲು ಅಗತ್ಯ ನೆರವು ನೀಡುವಂತೆ ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದ ನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ. 1 * 5 = 5

ಅಥವಾ

ನಿಮ್ಮನ್ನು ಧಾರವಾಡದ ಸಾಧನಕೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಪವಿತ್ರ' ಎಂದು ಭಾವಿಸಿಕೊಂಡು, ಯಾದಗಿರಿ ಜಿಲ್ಲೆಯ ಕೆಂಬಾವಿ ನಿವಾಸಿಯಾದ ನಿಮ್ಮ ಗೆಳತಿ 'ಭಾಗ್ಯವತಿ' ಎಂಬುವವಳನ್ನು ನಿಮ್ಮ ಶಾಲೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

45. **ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 * 5 = 5**

- ಸಾಮಾಜಿಕ ಪಿಡುಗುಗಳು
- ಭಾರತದ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆಯ ಮಹತ್ತ್ವ

---- 0 ----

# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ

## 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ

# ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**ಸಮಯ : 3.00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳು ಸಂಖ್ಯೆ;
   (ಎ) 25 (ಬಿ) 09 (ಸಿ) 13 (ಡಿ) 34
   **ಉತ್ತರ : (ಬಿ) 09**

2. 'ಗುರೂಪದೇಶ' ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ವೃದ್ಧಿ (ಸಿ) ಜಶ್ತ್ವ (ಡಿ) ಯಣ್
   **ಉತ್ತರ : (ಎ) ಸವರ್ಣದೀರ್ಘ**

3. ಇವುಗಳಲ್ಲಿ ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಹಾಲುಗಡಲು (ಬಿ) ಬೆಳ್ಗೊಡೆ (ಸಿ) ತಲೆಗಡರಿ (ಡಿ) ಸುಕ್ಕುಗಟ್ಟಿದೆ
   **ಉತ್ತರ : (ಸಿ) ತಲೆಗಡರಿ**

4. 'ಪ್ರೀತಿಯ ಹಣತೆಯ ಹಚ್ಚೋಣ' ವಾಕ್ಯವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   (ಎ) ವಿಧ್ಯರ್ಥಕ (ಬಿ) ಸಂಭಾವನಾರ್ಥಕ (ಸಿ) ನಿಷೇಧಾರ್ಥಕ (ಡಿ) ಭಾವನಾರ್ಥಕ
   **ಉತ್ತರ : (ಎ) ವಿಧ್ಯರ್ಥಕ**

5. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆಯಿದು;
   (ಎ) ವಾಕ್ಯವೇಷ್ಟನ (ಬಿ) ಆವರಣ (ಸಿ) ವಿವರಣಾತ್ಮಕ (ಡಿ) ಉದ್ಧರಣ
   **ಉತ್ತರ : (ಡಿ) ಉದ್ಧರಣ**

6. ವಿಶ್ವೇಶ್ವರಯ್ಯ ಅವರಿಗೆ ಭಾರತ ಸರ್ಕಾರ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಿತು. – ಈ ವಾಕ್ಯವು
   (ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ (ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ
   **ಉತ್ತರ : (ಎ) ಸಾಮಾನ್ಯ ವಾಕ್ಯ**

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 * 1 = 4**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

7. ವರ್ಣ : ಬಣ್ಣ : : ಪ್ರಸಾದ : **ಹಸಾದ**
8. ಕೃಷ್ಣರಾಜ ಒಡೆಯರ್ : ಅಂಕಿತನಾಮ : : ವಿದ್ವಾಂಸ : **ಅನ್ವರ್ಥನಾಮ**
9. ಸೊಗಸಾಗಿ : ಸಾಮಾನ್ಯಾರ್ಥಕಾವ್ಯಯ : : ಹೌದು : **ಕ್ರಿಯಾರ್ಥಕಾವ್ಯಯ**
10. ಬೀದಿಬೀದಿ : ದ್ವಿರುಕ್ತಿ : : ದಯೆದಾಕ್ಷಿಣ್ಯ : **ಜೋಡುನುಡಿ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

11. **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
    ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.
12. **ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?**
    ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಲಂಡನ್ ನಗರದ 'ಚೇರಿಂಗ್ ಕ್ರಾಸ್'.
13. **ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?**
    ಮುಸ್ಸಂಜೆಯ ಚಂದ್ರನು ಕತ್ತಲೆಯನ್ನು ಕಳೆಯುವಂತೆ ಹಿತವಚನವು ಮನಸ್ಸಿನ ಕೊಳೆಯನ್ನೆಲ್ಲ ತೊಳೆಯುತ್ತದೆ.
14. **ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಯಾವ ಪದವಿಯನ್ನು ನೀಡಿ ಗೌರವಿಸಿತು?**
    ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ **'ಸರ್'** ಪದವಿಯನ್ನು ನೀಡಿ ಗೌರವಿಸಿತು.

15. **ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?**
ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ **ಬಿರುಗಾಳಿಗೆ ಹೊಯ್ದಾಡುವ ಹಡಗನ್ನು** ಎಚ್ಚರದಲ್ಲಿ ಮುನ್ನಡೆಸಬೇಕು.
16. **ಯಾವ ಘಟನೆ ಹಲಗಲಿ ಬೇಡರು ಲಾವಣಿಗೆ ಕಾರಣವಾಗಿದೆ?**
**ಹಲಗಲಿಯ ಭಂಟರ ಹತಾರ ಕದನ ಘಟನೆ** ಹಲಗಲಿ ಲಾವಣಿಗೆ ಕಾರಣವಾಗಿದೆ.
17. **ಪೆರಿಯಾರ್ ಅವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?**
ಪೆರಿಯಾರ್ ಅವರು ಹುಟ್ಟು ಹಾಕಿದ ಸಂಘಟನೆಯ ಹೆಸರು 'ದ್ರಾವಿಡ ಕಳಗಂ.'

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

18. **ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?**
ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು **"ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯವನ್ನು ನೀಡುವವರು ಯಾರು?"** ಎಂದು ಹೇಳಿ ಸಂತೈಸಿದನು.

19. **ಶಬರಿಯು ರಾಮಲಕ್ಷ್ಮಣರನ್ನು ಹೇಗೆ ಉಪಚರಿಸಿದಳು?**
ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೊತ್ತಿಕೊಂಡಳು. **"ಅಯ್ಯೋ, ಏನೂ ಸಿದ್ಧತೆಯಿಲ್ಲ; ನಿನ್ನೆಯಷ್ಟು ಚೆನ್ನವಿಲ್ಲ"** ಎಂದು ಹಂಬಲಿಸಿ, ತನ್ನ ಮನದ ಬಯಕೆಯಂತೆ ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ, ಅಬ್ಬಾ ಎಂದು ಹಿಗ್ಗಿಹಿಗ್ಗಿ ಸಂತಸಪಟ್ಟಳು. **"ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು"** ಎಂದು ಹೇಳುತ್ತ ತಾನೇ ಅವರ ಕೈಯಲ್ಲಿ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

20. **ರಾಜರ ಪ್ರಕೃತಿ ಹೇಗಿರುತ್ತದೆ?**
ರಾಜರ ಪ್ರಕೃತಿ ಹೇಗಿರುತ್ತದೆಂದರೆ ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿರುತ್ತದೆ. ಅಹಂಕಾರದ ದಾಹಜ್ವರದಿಂದ ರಾಜರ ಮನಸ್ಸಿನಲ್ಲಿ ಕತ್ತಲೆ ತುಂಬಿರುತ್ತದೆ. ತಮ್ಮ ಬಳಿ ಇರುವ ದುಡ್ಡಿನ ಮಹಿಮೆಯಿಂದ ರಾಜರಿಗೆ ಅಹಂಕಾರ ಬರುತ್ತದೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ರಾಜ್ಯ ಎನ್ನುವುದು ಒಂದು ವಿಷವಿದ್ದಂತೆ; ಅದರ ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿ ಮಂಕಾಗಿಬಿಡುತ್ತದೆ.

21. **ವಿಶ್ವೇಶ್ವರಯ್ಯ ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಹೇಗೆ ಭದ್ರ ಬುನಾದಿಯನ್ನು ಹಾಕಿದರು?**
ವಿಶ್ವೇಶ್ವರಯ್ಯ ಅವರು ಕ್ರಿ.ಶ. 1913ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು. **ಹೀಗೆ ವಿಶ್ವೇಶ್ವರಯ್ಯ** ಅವರು ಮೈಸೂರು ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿಯನ್ನು ಹಾಕಿದರು?

22. **ದಂಡು ಹಲಗಲಿಯ ಮೇಲೆ ಹೇಗೆ ದಾಳಿ ಮಾಡಿತು?**
ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

23. **ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**
ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು. ಈ ಆದೇಶದನ್ವಯ ಬ್ರಿಟಿಷ್ ಅಧಿಕಾರಿಗಳು ಹಲಗಲಿಗೆ ಬಂದು, ಬೇಡರ ಬಳಿಯಲ್ಲಿದ್ದ ಆಯುಧಗಳನ್ನು ಬಲವಂತವಾಗಿ ಕಸಿದುಕೊಳ್ಳಲು ಪ್ರಾರಂಭಿಸಿತು. ಇದನ್ನು ವಿರೋಧಿಸಿ ಹಲಗಲಿಯ ಬೇಡರು ಆಯುಧಗಳನ್ನು ಕಸಿದುಕೊಳ್ಳಲು ಬಂದ ಅಧಿಕಾರಿಗಳ ಮೇಲೆ ದಾಳಿ ಮಾಡಿದರು. ಈ ಘಟನೆಯು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

24. **ಡಾ. ಅಂಬೇಡ್ಕರ್ ಅವರ ಪ್ರಕಾರ ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?**
ಡಾ. ಅಂಬೇಡ್ಕರ್ ಅವರ ಪ್ರಕಾರ ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕನ್ನು ನೀಡುವುದು. ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸುವ ಹಕ್ಕನ್ನು ನೀಡುವುದು. ಇವು ರಾಜಕೀಯ ಸ್ವಾತಂತ್ರ್ಯದ ಮಹತ್ತ್ವದ ಅಂಶಗಳಾಗಿವೆ. ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವಾಗಿದೆ. ರಾಜಕೀಯವಾದ ಸಮಸ್ತ ಅಧಿಕಾರವು ಜನತೆಯಿಂದ ಬರುತ್ತದೆ.

25. **'ಅನ್‌ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿ ಅವರ ಮೇಲೆ ಹೇಗೆ ಪರಿಣಾಮ ಬೀರಿತು?**
ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಗಾಂಧೀಜಿಯವರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. ಈ ಕೃತಿ ಗಾಂಧೀಜಿಯವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿತು. ಈ ಪುಸ್ತಕವನ್ನು ಗಾಂಧೀಜಿಯವರು 'ಸರ್ವೋದಯ' ಎಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದರು. ಇದು 'ಅನ್‌ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿಯವರ ಮೇಲೆ ಬೀರಿದ ಪರಿಣಾಮವಾಗಿದೆ.

26. **ಭಗತ್‌ಸಿಂಗ್ ಜಲಿಯನ್ ವಾಲಾಬಾಗ್ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**
ಜಲಿಯನ್ ವಾಲಾಬಾಗ್ ಮಾರಣಹೋಮ ಭಗತ್‌ಸಿಂಗ್‌ನ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿತು. ಕ್ರಿ. ಶ. 1921 ರಲ್ಲಿ ಅವನು "ಒಂದಲ್ಲ ಒಂದು ದಿನ ಈ ದಮನಕಾರಿ ಪ್ರಭುತ್ವವನ್ನು ಧ್ವಂಸಮಾಡಲು ಏನನ್ನಾದರೂ ಮಾಡಿಯೇ ತೀರುತ್ತೇನೆ; ಆಗ ಕ್ರೂರ ಬ್ರಿಟೀಷ್‌ರ ಆಳ್ವಿಕೆಯು ಅಂತ್ಯವಾಗುತ್ತದೆ" ಎನ್ನುವ ನಿಧಾರವನ್ನು ತೆಗೆದುಕೊಂಡನು.

27. **ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.**
ಕ್ರಿ.ಶ. 1916ರಲ್ಲಿ ತಮಿಳುನಾಡಿನಲ್ಲಿ ಪ್ರಾರಂಭವಾದ ಜಸ್ಟಿಸ್ ಪಾರ್ಟಿಯು ಬ್ರಾಹ್ಮಣೇತರ ಚಳವಳಿಯನ್ನು ಮುನ್ನಡೆಸಿತು. ಈ ಕ್ರಾಂತಿಕಾರಕ ಚಳವಳಿಯ ಹೊಸರೂಪವೇ ಇ.ವಿ. ರಾಮಸ್ವಾಮಿನಾಯ್ಕರ್ (ಪೆರಿಯಾರ್) ಅವರ ನೇತೃತ್ವದಲ್ಲಿ ಆರಂಭಗೊಂಡ 'ಆತ್ಮಗೌರವ ಚಳವಳಿ'. ಇವರು ದ್ರಾವಿಡ ಚಳವಳಿ ಎನ್ನುವ ಜನಾಂಗೀಯ ಪರಿಕಲ್ಪನೆ ಕೇಂದ್ರಿತ ಚಳವಳಿಯನ್ನು ರೂಪಿಸತೊಡಗಿದರು. ತಮಿಳು ಭಾಷೆಯನ್ನು ದ್ರಾವಿಡ ಭಾಷೆ ಎಂದರು. ಜಾತಿ ಮತ್ತು ಲಿಂಗ ತಾರತಮ್ಯಗಳನ್ನು ವಿರೋಧಿಸಿ, ಸಮಾನತೆಯ ಆಶಯವನ್ನು ಎತ್ತಿ ಹಿಡಿದರು. "ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ, ಜಾತಿ, ಲಿಂಗ, ಅಸಮಾನತೆಗಳಿಂದ ಹೊರಬಂದು ಸರ್ವಧರ್ಮಸಹಿಷ್ಣುತೆಯ ಸಮಾಜ ರೂಪುಗೊಳ್ಳಬೇಕು" ಎನ್ನುವುದು ಪೆರಿಯಾರ್ ಅವರ ಬದುಕಿನ ಧ್ಯೇಯವಾಗಿತ್ತು.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **2 * 3 = 6**

| | |
|---|---|
| **ಸ್ಥಳ,** | **1 ಅಂಕ** |
| **ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ವಾಕ್ಯರೂಪದಲ್ಲಿ ಬರೆಯುವುದು, ಭಾಷಾ ಶೈಲಿ** | |
| **ಒಟ್ಟು** | **3 ಅಂಕಗಳು** |

28. **ಪು. ತಿ. ನರಸಿಂಹಾಚಾರ್**
**'ಪು.ತಿ.ನ.'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್** ಅವರು **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು. ಕನ್ನಡ ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಶಬರಿ,** ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿವಿಜಯ, ಹಂಸ ದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶ ದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಮೊದಲಾದ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ'** ನೀಡಿ, ಗೌರವಿಸಲಾಗಿದೆ ಹಾಗೂ **'ಹಂಸ ದಮಯಂತಿ ಮತ್ತು ಇತರ ರೂಪಕಗಳು'** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'ಯನ್ನು** ನೀಡಿ ಗೌರವಿಸಲಾಗಿದೆ. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಿ. ಲಿಟ್. ಪದವಿಯನ್ನು ನೀಡಿ ಗೌರವಿಸಿದೆ.

29. **ದ. ರಾ. ಬೇಂದ್ರೆ**
**ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು **ಕ್ರಿ. ಶ. 1896** ರಲ್ಲಿ **ಧಾರವಾಡ**ದಲ್ಲಿ ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಗರಿ,** ನಾಕುತಂತಿ, ನಾದಲೀಲೆ, ಕೃಷ್ಣಕುಮಾರಿ, ಉಯ್ಯಾಲೆ, ಸಖೀಗೀತ, ಮೇಘದೂತ, ಗಂಗಾವತರಣ, ಅರಳು ಮರಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

30. **ಏನು ಹೇಳೈ ಕರ್ಣ ಚಿತ್ತ**
**ಗ್ಲಾನಿ ಯಾವುದು ಮನಕೆ ಕುಂತೀ**
**ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥**

| | | | |
|---|---|---|---|
| 3 | 4 | 3 | 4 |
| — ∪ | — — | — ∪ | — — |
| ಏನು | ಹೇಳೈ | ಕರ್ಣ | ಚಿತ್ತ |

| | | | |
|---|---|---|---|
| 3 | 4 | 3 | 4 |
| — ∪ | — ∪ ∪ | ∪ ∪ ∪ | — — |
| ಗ್ಲಾನಿ | ಯಾವುದು | ಮನಕೆ | ಕುಂತೀ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| — ∪ | ∪∪ ∪∪ | — ∪ | — ∪ ∪ | — ∪ | — ∪ ∪ | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

31. **ಮಾರಿಗೌತಣವಾಯ್ತು ನಾಳಿನ ಭಾರತವು**

**ಅಲಂಕಾರ** : ರೂಪಕಾಲಂಕಾರ.

ಲಕ್ಷಣ : ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದು **'ರೂಪಕಾಲಂಕಾರ'**

**ಉಪಮೇಯ** : ನಾಳಿನ ಭಾರತ ಯುದ್ಧ

**ಉಪಮಾನ** : ಮಾರಿಯ ಔತಣ

**ಸಮನ್ವಯ** : ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ. ಆದ್ದರಿಂದ ಇದು ರೂಪಕಾಲಂಕಾರಕ್ಕೆ ಉದಾಹರಣೆಯಾಗಿದೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.**

32. **ತಾಳಿದವನು ಬಾಳಿಯಾನು**

**ಅಥವಾ**

**ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ.**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಸ್ವಾರಸ್ಯ : ಅಂತರಾರ್ಥ – ಭಾಷೆ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

33. **"ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ"**
**ಆಯ್ಕೆ :** ಈ ವಾಕ್ಯವನ್ನು ಶ್ರೀರಂಗ ಮತ್ತು ನಾ. ಕಸ್ತೂರಿ ಅವರು ಸಂಪಾದಿಸಿರುವ 'ಏಕಾಂಕ ನಾಟಕಗಳು' ಕೃತಿಯಿಂದ ಆಯ್ದ, **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆರಿಸಲಾಗಿದೆ.
**ಸಂದರ್ಭ :** ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ದನುವಿನ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿ, ಮರೆಯಲ್ಲಿ ನಿಂತು, ತನ್ನ ಬರುವಿಕೆಗಾಗಿ ಹಂಬಲಿಸಿ ಹಾಡುತ್ತಿದ್ದ ಶಬರಿಯನ್ನು ಕಂಡ ಸಂದರ್ಭದಲ್ಲಿ ಶ್ರೀರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ಶ್ರೀರಾಮನು "ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ಶಬರಿಯ ಪ್ರೀತಿಯನ್ನು ಕಂಡು ನಾನು ನಾಚುತಿರುವೆನು" ಎಂದು ಹೇಳುವುದು ಶ್ರೀರಾಮನ ಹೃದಯಶ್ರೀಮಂತಿಕೆಗೆ ಸಾಕ್ಷಿಯಾಗಿದೆ.

34. **"ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"**
**ಆಯ್ಕೆ :** ಈ ವಾಕ್ಯವನ್ನು **ಶ್ರೀ ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ಈ ವಿಶ್ವೇಶ್ವರಯ್ಯ ಅವರನ್ನು ಕುರಿತು ಈ ಮಾತುಗಳನ್ನು ಹೇಳುತ್ತಾರೆ.
**ಸ್ವಾರಸ್ಯ :** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯ ಪ್ರವೃತ್ತರಾಗಿ ಆದರ್ಶಪ್ರಾಯರಾಗಿದ್ದರು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

35. **"ದುಡ್ಡು ದುರಭಿಮಾನದ ತವರು"**
**ಆಯ್ಕೆ :** ಪ್ರಸ್ತುತ ವಾಕ್ಯವನ್ನು ವಿದ್ಯಾವಾಚಸ್ಪತಿ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ಅನುವಾದಿಸಿರುವ **'ಕಾದಂಬರಿ'** ಎನ್ನುವ ಕೃತಿಯಿಂದ ಆಯ್ದ, **'ಶುಕನಾಸನ ಉಪದೇಶ'** ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :** ಕಾಶ್ಮೀರದ ಮಹಾರಾಜ ತಾರಾಪೀಡನ ಸುಪುತ್ರನಾದ ಚಂದ್ರಾಪೀಡನು ಯುವರಾಜ್ಯ ಪಟ್ಟಾಭಿಷೇಕದ ಪೂರ್ವಭಾವಿಯಾಗಿ ಮಹಾಮಂತ್ರಿ ಶುಕನಾಸನನ್ನು ಸಂದರ್ಶಿಸಲು ಬಂದ ಸಂದರ್ಭದಲ್ಲಿ ಈ ಮಾತು ಬಂದಿದೆ. ಮಹಾಮಂತ್ರಿ ಶುಕನಾಸನು ರಾಜಪುತ್ರ ಚಂದ್ರಾಪೀಡನಿಗೆ ರಾಜರ ಪ್ರಕೃತಿ ಹಾಗೂ ದುಡ್ಡಿನ ಮಹಿಮೆಯನ್ನು ಕುರಿತು ಉಪದೇಶಿಸುವಾಗ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :** "ದುಡ್ಡಿನ ಹುಚ್ಚು ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ; ದುಡ್ಡಿನ ಅಹಂಕಾರದಿಂದ ಜನರು ದುರಭಿಮಾನಿಗಳಾಗುತ್ತಾರೆ" ಎನ್ನುವುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

36. **"ಜೀವ ಸತ್ತು ಹೋಗುವುದು ಗೊತ್ತ"**
**ಆಯ್ಕೆ :** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.
**ಸಂದರ್ಭ :** ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.
**ಸ್ವಾರಸ್ಯ :** ಹಲಗಲಿಯ ಬೇಡರು "ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

37. **"ನಿನ್ನಪದೆಸೆಯ ಬಯಸುವನಲ್ಲ"**
**ಆಯ್ಕೆ :** ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದ ಉದ್ಯೋಗಪರ್ವದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :** ತನ್ನ ಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು "ನಿನ್ನ ದುರ್ದೆಸೆಯನ್ನು ಕಾಣಲು ಇಷ್ಟವಿಲ್ಲ; ನಾನು ನಿನ್ನ ಹಿತಚಿಂತಕ" ಎಂದು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

38. **"ಪ್ರೀತಿಯ ಹಣತೆ ಹಚ್ಚೋಣ"**

**ಆಯ್ಕೆ :** ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು **ಸ್ವಾರಸ್ಯಪೂರ್ಣವಾಗಿ** ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4 * 1 = 4**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1 ಅಂಕ)**

39. ಕಲುಷಿತವಾದೀ **ನದೀಜಲಗಳಿಗೆ**
**ಮುಂಗಾರಿನ ಮಳೆಯಾಗೋಣ**
**ಬರಡಾಗಿರುವೀ ಕಾಡುಮೇಡುಗಳ**
**ವಸಂತವಾಗುತ** ಮುಟ್ಟೋಣ
ಅಥವಾ
ಮತಗಳೆಲ್ಲವು **ಪಥಗಳು ಎನ್ನುವ**
**ಹೊಸ ಎಚ್ಚರದೊಳು ಬದುಕೋಣ**
**ಭಯ ಸಂಶಯದೊಳು ಕಂದಿದ ಕಣ್ಣೊಳು**
**ನಾಳಿನ ಕನಸನು** ಬಿತ್ತೋಣ

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **4 * 1 = 4**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **3. ಅಂಕಗಳು** |
| **ಒಟ್ಟು** | **4. ಅಂಕಗಳು** |

40. **ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ**
**ತಿಂಗಳಿನೂರಿನ ನೀರನು ಹೀರಿ**
**ಆಡಲು ಹಾಡಲು ತಾ ಹಾರಾಡಲು**
**ಮಂಗಳಲೋಕದ ಅಂಗಳಕೇರಿ**
**ಹಕ್ಕಿ ಹಾರುತಿದೆ ನೋಡಿದಿರಾ?**

**ವರಕವಿ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ.
ಕಾಲದ ಓಟದಲ್ಲಿ ಅಂದರೆ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿ ಆಗಬಹುದು. ಚಂದ್ರಲೋಕವು ಬರಿ ಊರು ಆಗಬಹುದು ಹಾಗೂ ಮಂಗಳ ಲೋಕವು ಭೂಮಿಗೆ ಅಂಗಳ ಆಗಬಹುದು. ಮಾನವನಿಗೆ ಈ ಆಕಾಶಕಾಯಗಳು ಆಡಲು, ಹಾಡಲು ಹಾಗೂ ಹಾರಾಡಲು ವೇದಿಕೆ ಆಗಬಹುದು. ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ ಈ ನುಡಿಯಲ್ಲಿ ವ್ಯಕ್ತವಾಗಿದೆ. **ಕವಿಯು ಕಂಡ ಭವಿಷ್ಯತ್ತಿ ವೈಜ್ಞಾನಿಕ ದೃಷ್ಟಿಕೋನವು ಇಲ್ಲಿ ಅಭಿವ್ಯಕ್ತಗೊಂಡಿದೆ.**

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

| | |
|---|---|
| **ಉತ್ತರದ ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ** | **3 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕಗಳು** |
| **ಒಟ್ಟು** | **3 ಅಂಕಗಳು** |

41. **ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?**

ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿನ ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಸಂಚರಿಸುತ್ತವೆ. 'ಲಂಡನ್ ನಗರದಲ್ಲಿರುವ 'ವೂಲವರ್ಥ' ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಒಂದು ಮಹಾಕೋಶವಾಗಿದೆ. ಇಲ್ಲಿ ಎಲ್ಲ ತರಹದ ಸಾಮಗ್ರಿಗಳು ದೊರಕುತ್ತವೆ. ಲಂಡನ್ ನಗರದ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹೆಣ್ಣುಮಕ್ಕಳೇ ಕಾರ್ಯನಿರ್ವಹಿಸುತ್ತಾರೆ. 'ಚೇರಿಂಗ್ ಕ್ರಾಸ್' ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ. ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿ ನೆಲ್ಸನ್ ಅವರ ಮೂರ್ತಿ ಇದೆ. ಇಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಯು ವೈವಿಧ್ಯಮಯವಾಗಿರುತ್ತದೆ. 'ವೆಸ್ಟ್‌ಮಿನ್‌ಸ್ಟರ್ ಅಬೆ' ಎಂಬುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರ. ಇದನ್ನು **'ಸತ್ತವರ ಸ್ಮಾರಕ'** ಎಂದು ಸಹ ಕರೆಯುತ್ತಾರೆ. ಪೊಯೆಟ್ಸ್ ಕಾರ್ನರ್‌ನಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಕವಿಪುಂಗವರ ಸಮಾಧಿಗಳಿವೆ. ಇದರ ಸಮೀಪದಲ್ಲೇ ಪ್ರಖ್ಯಾತ ವಿಜ್ಞಾನಿಗಳ, ವ್ಯಾಪಾರಿಗಳ, ವಾಸ್ತುಶಿಲ್ಪಿಗಳ, ಸರದಾರರ ಸೇನಾಪತಿಗಳ ಸಮಾಧಿಗಳೂ ಸಹ ಇವೆ. ಲಂಡನ್ ನಗರದಲ್ಲಿ ಇರುವ ಅರಮನೆಯ ಸೌಂದರ್ಯ ಹಾಗೂ ರಾಜರುಗಳ ವೈಭವ ರಾಯಲ್ ಚಾಪೆಲ್‌ನಲ್ಲಿ ಕಂಡುಬರುತ್ತದೆ. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಕೂಡುವ 'ಸ್ಟೋನ್ ಆಫ್ ಸ್ಕೋನ್' ವಿಶಿಷ್ಟವಾದುದ್ದಾಗಿದೆ. ಈ ಮೇಲಿನ ಎಲ್ಲಾ ವಿಶೇಷತೆಗಳನ್ನು ಲಂಡನ್ ನಗರದ ವೀಕ್ಷಣೆಯಲ್ಲಿ ಲೇಖಕರು ಗುರುತಿಸುತ್ತಾರೆ.

ಅಥವಾ

**'ವೆಸ್ಟ್‌ಮಿನಿಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ. ವಿವರಿಸಿ.**

ಲಂಡನ್ ನಗರದಲ್ಲಿ ಇರುವ **'ವೆಸ್ಟ್‌ಮಿನಸ್ಟರ್ ಅಬೆ'** ಎಂಬುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರ. ಇದು ದಿವಂಗತರಾದ ಸಂತರು, ಸಾರ್ವಭೌಮರು ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಆದ್ದರಿಂದ ಇದನ್ನು **'ಸತ್ತವರ ಸ್ಮಾರಕ'** ಎಂದೂ ಸಹ ಕರೆಯುತ್ತಾರೆ. ಈ ಸ್ಮಾರಕವು "ಮರ್ತ್ಯತ್ವವೇ, ಎಷ್ಟು ಗೋರಿಗುಂಪುಗಳು ಇಲ್ಲಿವೆ; ನೋಡಿ ಅಂಜು" ಎಂಬ ಬ್ಯೂಮಾಂಟ್ ಕವಿಯ ಹಾಡನ್ನು ನೆನಪಿಸುತ್ತದೆ. ಗೋಲ್ಡ್‌ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು **'ವೆಸ್ಟ್‌ಮಿನಸ್ಟರ್ ಅಬೆ'**ಯನ್ನು ಕುರಿತು ಉತ್ತಮವಾದ ನಿಬಂಧಗಳನ್ನು ರಚಿಸಿದ್ದಾರೆ. ಇಂದಿಗೂ ವೆಸ್ಟ್‌ಮಿನಸ್ಟರ್ ಅಬೆಯು ಕಬ್ಬಿಗರ ಸ್ಫೂರ್ತಿಯ ತವರುಮನೆಯಾಗಿದೆ. ಈ ಕಟ್ಟಡದಲ್ಲಿ ಹೊರಗಿನಿಂದ ಶೃಂಗರಿಸಿದ ಸಣ್ಣ ಬಾಗಿಲೊಂದು ಕಾಣುತ್ತದೆ ಒಳಗೆ ಮಾತ್ರ ಭವ್ಯವಾಗಿದೆ. ಇಲ್ಲಿ ಪಾದ್ರಿಗಳು ಸತ್ತವರಿಗಾಗಿ ಪ್ರಾರ್ಥನೆ ಮಾಡುತ್ತಾರೆ. ಇಲ್ಲಿಗೆ ಬಹುಜನರು ಪ್ರಾರ್ಥನೆಗಿಂತ ಪ್ರಾರ್ಥನಾ ಮಂದಿರವನ್ನು ನೋಡಲು ಬರುತ್ತಾರೆ. ಈ ಮಂದಿರದ ನಡುವೆ ಇರುವ ಸಣ್ಣ ಹಾದಿಯ ಎಡಬಲಕ್ಕೆ ರಾಜಕಾರಣಚತುರರ ಶಿಲಾಮೂರ್ತಿಗಳಿವೆ. ರಾಜರಿಗಿಂತ, ಕವಿಗಳಿಗಿಂತ ಇವರೇ ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದರೆಂಬುದು ಇಲ್ಲಿಯವರ ಅಭಿಪ್ರಾಯವಾಗಿದೆ. ಈ ಬಂಗಾರದ ಬಣ್ಣದಿಂದ ಲೇಪಿತವಾದ ಶಿಲಾಮೂರ್ತಿಗಳು ಹಾಗೂ ಉತ್ತಮವಾದ ಕೆತ್ತನೆಯ ಕೆಲಸವು ಸಂದರ್ಶಕರ ಮನಸನ್ನು ಸೆಳೆಯುತ್ತವೆ.

42. **ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? ವಿವರಿಸಿ.**

"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು. ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಕಲಿಭೀಮ, ಅರ್ಜುನರು ಜನಿಸಿದರು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ? ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು, ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆಯುವುದು ಸರಿಯೇ? ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?" ಎಂದು ಆಮಿಷ ಒಡ್ಡಿದನು.

**ಅಥವಾ**

**ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು, ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ' ಎಂದುಕೊಂಡನು. "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ್ನು ಕೊಂದೆ, ವೀರ ದುರ್ಯೋಧನನೇ ಒಡೆಯನು, ಆತನ ಹಗೆಯೆ ಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ" ಎಂದನು. "ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು. ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

43. **ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*04 =04 (2+2)**

**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)**

**ಪ್ರಶ್ನೆಗಳು :**

1. **ರಾಹುಲ್ ದ್ರಾವಿಡ್ ಅವರನ್ನು 'ಗೋಡೆ' ಎಂದು ಕರೆಯಲು ಕಾರಣವೇನು?**
ಒಂದು ಉತ್ತಮವಾದ ಎಸೆತವು ಪ್ರಸಿದ್ಧ ಆಟಗಾರನನ್ನಾದರೂ ಔಟ್ ಮಾಡಬಹುದು. ಆದರೆ ರಾಹುಲ್ ದ್ರಾವಿಡ್ ಅವರದ್ದು ಬಹುತೇಕ ಎಲ್ಲಾ ರೀತಿಯ ಎಸೆತಗಳನ್ನು ನಿಭಾಯಿಸುವ, ವಿಕೆಟ್ಟನ್ನು ಒಪ್ಪಿಸದಿರುವ, ಸಾವಕಾಶವಾಗಿ ರನ್ ಗಳಿಸುವ ಅದ್ವಿತೀಯ ಬ್ಯಾಟಿಂಗ್ ಶೈಲಿ. ದಿನವಿಡಿ ಕ್ರೀಸಿನಲ್ಲಿ ನಿಲ್ಲಬಲ್ಲ ಸಾರ್ಮಥ್ಯ ಅವರದ್ದು. ಅದೇ ಅವರನ್ನು 'ಗೋಡೆ' ಎಂಬ ಅನ್ವರ್ಥನಾಮದಿಂದ ಪ್ರಸಿದ್ಧರನ್ನಾಗಿಸಿತು.
2. **ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯಗಳೇನು?**
ಬೌಂಡರಿ ಬಾರಿಸು ಅಥವಾ ಔಟಾಗು ಎಂಬ ಮನೋಭಾವದ ಆಟಗಾರರಿಗಿಂತ ಭಿನ್ನವಾದ ಶೈಲಿ ರಾಹುಲ್ ಅವರದ್ದು. ಸಂಯಮದ ಹೊಡೆತ, ಉತ್ತಮ ಎಸೆತವನ್ನು ಗೌರವಿಸುವುದು, ಕೆಟ್ಟ ಎಸೆತವನ್ನು ಅಷ್ಟೇ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದು, ಎಲ್ಲ ಬಗೆಯ ಹೊಡೆತಗಳಲ್ಲೂ ಶಿಸ್ತು, ಕಲಾತ್ಮಕತೆ, ಎಲ್ಲವೂ ನಯನ ಮನೋಹರ. ಇವು ರಾಹುಲ್ ದ್ರಾವಿಡ್ ಅವರ ಕ್ರಿಕೆಟ್ ಆಟದ ವೈಶಿಷ್ಟ್ಯವಾಗಿತ್ತು.

44. **ನಿಮ್ಮನ್ನು ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಜಯಂತ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ 'ಭಾಷಾ ಪ್ರಯೋಗಾಲಯ' ಪ್ರಾರಂಭಿಸಲು ಅಗತ್ಯ ನೆರವು ನೀಡುವಂತೆ ಮೈಸೂರಿನ ಕೇಂದ್ರೀಯ ಭಾಷಾ ಸಂಸ್ಥಾನದ** ನಿರ್ದೇಶಕರಿಗೆ ಮನವಿ ಪತ್ರವನ್ನು ಬರೆಯಿರಿ. **1 * 5 = 5**

**ಅಥವಾ**

**ನಿಮ್ಮನ್ನು ಧಾರವಾಡದ ಸಾಧನಕೇರಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಪವಿತ್ರ' ಎಂದು ಭಾವಿಸಿಕೊಂಡು, ಯಾದಗಿರಿ ಜಿಲ್ಲೆಯ ಕೆಂಬಾವಿ ನಿವಾಸಿಯಾದ ನಿಮ್ಮ ಗೆಳತಿ 'ಭಾಗ್ಯವತಿ' ಎಂಬುವವಳನ್ನು ನಿಮ್ಮ ಶಾಲೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.**

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಭಾಷಾ ಶೈಲಿ, ಪದಬಂಧ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |

**ಅಥವಾ**

| | |
|---|---|
| ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| ಭಾಷಾ ಶೈಲಿ, ಪದಬಂಧ, ವಿನ್ಯಾಸ | 1 ಅಂಕ |
| ಒಟ್ಟು | 5 ಅಂಕಗಳು |


45. **ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**
**1 * 5 = 5**

- ಸಾಮಾಜಿಕ ಪಿಡುಗುಗಳು
- ಭಾರತದ ಸ್ವಾತಂತ್ರೋತ್ಸವದ ಅಮೃತ ಮಹೋತ್ಸವ ಆಚರಣೆಯ ಮಹತ್ತ್ವ

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ | 2 ಅಂಕಗಳು |
| ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| ಭಾಷಾ ಶೈಲಿ, ಪದಬಂಧ | 1 ಅಂಕ |
| ಒಟ್ಟು | 5 ಅಂಕಗಳು |

**---- 0 ----**

# ನಿಮ್ಮ ಶಾಲೆಯ ಉತ್ತಮ ಫಲಿತಾಂಶಕ್ಕಾಗಿ ನಮ್ಮ ಪ್ರಕಟಣೆಗಳು

















ನಿಮ್ಮ ಪ್ರೀತಿಯ ಗೆಳೆಯ

**ಬಿ. ರವೀಶ್ ಕುಮಾರ್**

**ನಿವೃತ್ತ ಕನ್ನಡ ಭಾಷಾ ಶಿಕ್ಷಕರು**

**ರಾಜ್ಯ ಸಂಪನ್ಮೂಲ ವ್ಯಕ್ತಿಗಳು (ಕನ್ನಡ)**

**# 2905, ಹೊನ್ನಸಿರಿ, 3 ನೆಯ ತಿರುವು,**

**'ಎಫ್' ಬ್ಲಾಕ್, ಕನಕದಾಸನಗರ, ಮೈಸೂರು – 570033**

**ಸಂಚಾರಿವಾಣಿ ಸಂಖ್ಯೆ : 9448958498**